ಕಥೆ

# ದಹನ



**ಪ್ರಕಾಶ ನಾಯಕ**

ಕಲೆ: ವಿಶ್ವನಾಥ್ ಎ.ಎಸ್.

ರಾತ್ರಿ ಒಂಬತ್ತು ಗಂಟೆಯಾಗುತ್ತಿದ್ದ ಹಾಗೆ ನಿದ್ದೆಹೋಗಿದ್ದ ನನ್ನನ್ನು, 'ಕಾಡ್ಗಿಚ್ಚು ಕಾಣಿಸಿಕೊಂಡಿದೆ, ಎಲ್ಲರೂ ತಕ್ಷಣ ಹೊರಹೋಗಲು ತಯಾರಾಗಿ' ಎನ್ನುವ ಕೂಗು ಎಬ್ಬಿಸಿತು. ಹೇಗಿದ್ದೆನೋ ಹಾಗೆಯೇ ಉಟ್ಟ ಬಟ್ಟೆಯಲ್ಲಿ, ಫೋನ್ ಮತ್ತು ನನ್ನ ಹ್ಯಾಂಡ್ ಬ್ಯಾಗ್ ವಿನಹ ಮತ್ತೇನನ್ನೂ ತರಲಾಗದಷ್ಟು ಗಾಬರಿಯಿಂದ, ರೂಮಿನಿಂದ ಹೊರಬಿದ್ದೆ. ಆಗಲೇ ರಿಸೆಪ್ಷನ್ನಿನ ಮುಂದೆ ಜನಜಂಗುಳಿ. ಕೆಲವರು ನಿದ್ದೆಯ ಮಂಪರಿನಲ್ಲಿ, ಇನ್ನು ಕೆಲವರು ಮಲಗುವ ಮುನ್ನ ತೆಗೆದುಕೊಂಡ ಔಷಧಿಗಳ ಮಂಪರಿನಲ್ಲಿ ಈ ನಡುರಾತ್ರಿಯಲ್ಲಿ ತಮ್ಮನ್ನು ಯಾಕೆ ಎಬ್ಬಿಸಿದ್ದಾರೆ, ತಾವೇನು ಮಾಡಬೇಕು ಎಂದು ತಿಳಿಯದೆ ಗಾಬರಿಯಿಂದ ಅತ್ತಿಂದಿತ್ತ ಓಡಾಡುತ್ತಿದ್ದರು. ಸಿಯಾರಾ ಪರ್ವತ ಶ್ರೇಣಿಯ ಪಶ್ಚಿಮ ಇಳಿಜಾರಿನ ಹಸಿರಿನ ನಡುವೆ ನಂದನವನದಂತಿದ್ದ ನಮ್ಮ ಟ್ರಾಂಕ್ವಿಲ್ ಮೀಡೋಸ್ ವೃದ್ಧಾಶ್ರಮ ಕಾಡ್ಗಿಚ್ಚಿನ ಆಕ್ರಮಣಕ್ಕೆ ಬೆಚ್ಚಿಬಿದ್ದು ತಲ್ಲಣಗೊಂಡಿತ್ತು; ಯಾವ ಕ್ಷಣದಲ್ಲಿಯೂ ಬಾಯ್ದೆರೆದು ಬರಲಿರುವ ಬೆಂಕಿಗೆ ಬಲಿಯಾಗಬಹುದು ಎನ್ನುವ ಭಯದ ಕರಾಳ ಛಾಯೆಯೇ ಎಲ್ಲರ ಮುಖದಲ್ಲಿಯೂ. ವೃದ್ಧಾಶ್ರಮದೆಡೆಗೆ ಧಾವಿಸುತ್ತಿದ್ದ ಹೊಗೆಯ ಕಪ್ಪು ಮೋಡಗಳು ಇನ್ನೂ ದೂರದಲ್ಲಿದ್ದರೂ ಅದರ ಹಿನ್ನೆಲೆಯಲ್ಲಿದ್ದ ಬೆಂಕಿಯ ಕಾರಣದಿಂದಲೋ ಏನೋ ಆ ಸರಿರಾತ್ರಿಯಲ್ಲೂ ವಿಜೃಂಭಿಸುತ್ತಿದ್ದವು.

ರಾತ್ರಿ ಬೆಳೆದಂತೆ ಟ್ರಾಂಕ್ವಿಲ್ ಮೀಡೋಸ್‌ನ ವಾತಾವರಣ ಇನ್ನಷ್ಟು ಪ್ರಕ್ಷುಬ್ಧವಾಗತೊಡಗಿತು. ಆ ಹೊಗೆಯನ್ನೇ ಉಸಿರಾಡುತ್ತ, ಯಾವ ಕ್ಷಣದಲ್ಲಿಯೂ ಕಾಣಿಸಿಕೊಳ್ಳಬಹುದಾದ ದಾವಾನಲವನ್ನು ಎದುರುಗೊಳ್ಳಲು ಸಿದ್ಧರಾಗುತ್ತಿದ್ದೆವು. ಕ್ಷಣದಿಂದ ಕ್ಷಣಕ್ಕೆ ಆ ಕಾರ್ಮೋಡದ ಗಾತ್ರ ರಾಕ್ಷಸನ ಹಾಗೆ ಬೆಳೆಯುತ್ತ, ಗೆಲುವಿನಂಚಿನಲ್ಲಿದ್ದ ಉನ್ಮತ್ತ ಸೇನೆಯ ಹಾಗೆ ಮುಂದಮುಂದಕ್ಕೆ ಬರುತ್ತಿತ್ತು. ಬರಬಹುದಾದ ಬೆಂಕಿ ಮಾಡಬಹುದಾದ ಹರಾಕಿರಿ ಅಕ್ಕಪಕ್ಕದ ಮುಖಗಳಲ್ಲಿ ಆಗಲೇ ಕುಣಿಯುತ್ತಿದ್ದುದನ್ನು ಕಂಡು ಸಾಮಾನ್ಯವಾಗಿ ಧೃತಿಗೆಡದ ನನ್ನ ದೃಷ್ಟಿಯೂ ಮಂಜಾಗತೊಡಗಿತು. ನನ್ನ ಚರ್ಮ ಒಳಗಿನ ಭಯದಿಂದ ಸುಡುತ್ತಿದೆಯೋ ಅಥವಾ ಮೈಮೇಲೆ ಬಂದಿಳಿಯುತ್ತಿದ್ದ ಬೆಚ್ಚಗಿನ ಬೂದಿಯಿಂದಲೋ ತಿಳಿಯದಾಯಿತು. ಇದ್ದ ಬೆರಳೆಣಿಕೆಯಷ್ಟು ಸಹಾಯಕರು ಆಶ್ರಮದ ವೃದ್ಧರನ್ನು ಶಾಂತಗೊಳಿಸಲು ಹರಸಾಹಸ ಪಡುತ್ತಿದ್ದರು. ಎಲ್ಲರನ್ನೂ ಸುರಕ್ಷಿತ ಪ್ರದೇಶಗಳಿಗೆ ಸಾಗಿಸಲು ವ್ಯವಸ್ಥೆ ಮಾಡಲಾಗಿದೆಯೆಂದೂ, ಮನೆಯವರನ್ನು ಸಂಪರ್ಕಿಸಲಾಗಿದೆಯೆಂದೂ ಮತ್ತೆಮತ್ತೆ ಹೇಳುತ್ತಿದ್ದರು. ಅವರು ಶಾಂತವಾಗಿರಲು ಹೇಳಿದಷ್ಟೂ ನಮ್ಮಲ್ಲಿನ ಭಯ ಹೆಚ್ಚುತ್ತಿತ್ತು. ನಮ್ಮಲ್ಲಿ ಕೆಲವರು ಆಗಲೇ ಉಸಿರಾಟದ ತೊಂದರೆಯಿಂದ ಕುರ್ಚಿಗಳಲ್ಲಿ, ಅದೂ ಸಿಗದವರು ನೆಲದಮೇಲೆ ಕುಸಿದು ಕುಳಿತಿದ್ದರು.